
# ಅದ್ಭುತ ಧ್ಯಾನಸಿದ್ಧ ಬೋಧಿಧರ್ಮ

ಸ್ವಾಮಿ ವೀರೇಶಾನಂದ



## ಚೀನಾದಲ್ಲಿ ಬೌದ್ಧಧರ್ಮ

ಬೌದ್ಧಧರ್ಮದ ಉಗಮವಾದದ್ದು ಭಾರತದಲ್ಲಿಯೇ. ಆದರೆ ಬಹಳ ಹಿಂದೆಯೇ ಇದು ಏಷ್ಯಾಖಂಡದ ಹಲವು ದೇಶಗಳಲ್ಲಿ ಪ್ರಸಾರಗೊಂಡಿತು. ಇದಕ್ಕೆ ಕಾರಣ ಬೌದ್ಧಧರ್ಮದ ಪರಂಪರೆಯಲ್ಲಿ ಹುಟ್ಟಿಬಂದ ಸಂತರು, ಮಹಾತ್ಮರು. ಇವರು ಬಹಳ ಪರಿಶ್ರಮಪಟ್ಟು ಹಲವು ನಾಡುಗಳಿಗೆ ಹೋಗಿ ಬೌದ್ಧಧರ್ಮವನ್ನು ಪ್ರಚುರಪಡಿಸಿದರು. ಅದರಲ್ಲೂ ಚೀನಾ ದೇಶದಲ್ಲಿ ಬೌದ್ಧಧರ್ಮ ಬಹಳ ಹಿಂದಿನ ಕಾಲದಿಂದ ಅನುಷ್ಠಾನಗೊಳ್ಳುತ್ತಿದೆ. ಆದರೆ ಪೂಜೆ-ಆಚರಣೆಗಳು, ತತ್ತ್ವಶಾಸ್ತ್ರದ ಅಧ್ಯಯನ, ವಾದ ವಿವಾದಗಳು — ಇವುಗಳಿಗೆ ಬಹಳ ಮಹತ್ವವನ್ನು ನೀಡಲಾಗುತ್ತಿತ್ತು. ಬೌದ್ಧ ಸಾಧನೆಯ ತಿರುಳಾದ ಧ್ಯಾನಾಭ್ಯಾಸ ಮತ್ತು ಮನಸ್ಸಿನ ನಿಯಂತ್ರಣಗಳಿಗೆ ಅಷ್ಟು ಗಮನ ನೀಡುತ್ತಿರಲಿಲ್ಲ. ಧ್ಯಾನಾಭ್ಯಾಸದಿಂದ ಚಿತ್ತವೃತ್ತಿಗಳನ್ನು ಶಮನಗೊಳಿಸಿ, ನಿರ್ವಾಣವನ್ನು ಗಳಿಸಿಕೊಳ್ಳಬೇಕೆಂಬ ತವಕ ಅಲ್ಲಿನ ಬೌದ್ಧಧರ್ಮೀಯರಲ್ಲಿ ಅಷ್ಟಾಗಿ ಇರಲಿಲ್ಲ.

ಕ್ರಿ.ಪೂ. ೪೯೫ ರಷ್ಟು ಹಿಂದೆಯೇ ಬುದ್ಧಭದ್ರ ಅಥವಾ ಬಾತವೋ (ಚೀನೀ ಭಾಷೆಯಲ್ಲಿ) ಎಂಬ ಬೌದ್ಧ ಸಂನ್ಯಾಸಿಯು ಭಾರತದಿಂದ ಚೀನಾ ದೇಶಕ್ಕೆ ಹೋದನು. ಕ್ಸಿಯೋ ಶೆಂಗ್ ಎಂಬ ಹೆಸರಿನ ಬೌದ್ಧಧರ್ಮದ ಪದ್ಧತಿಯನ್ನು ಅವನು ಬೋಧಿಸಿದನು. ಚೀನಾ ಚಕ್ರವರ್ತಿಯಾಗಿದ್ದ ಶಾವೋ ವೆನ್ ಎನ್ನುವವನು ಶಾವೋಷಿ ಪರ್ವತಗಳ ತಪ್ಪಲಿನಲ್ಲಿ ಅವನಿಗೆ ಯಥೇಚ್ಛವಾದ ಭೂಮಿಯನ್ನು ನೀಡಿದನು. ಅಲ್ಲಿಯೇ ಮುಂದೆ ಬಹು ಪ್ರಸಿದ್ಧವಾದ ಶಾವೊಲಿನ್ ಬೌದ್ಧ ದೇಗುಲವನ್ನು ಬುದ್ಧಭದ್ರನು ನಿರ್ಮಿಸಿದನು.

## ಕಾಂಚೀಪುರದ ಬೋಧಿಧರ್ಮ

ಇದೇ ಕಾಲಮಾನದಲ್ಲಿ ದಕ್ಷಿಣ ಭಾರತದ ಕಾಂಚೀಪುರವು ಐತಿಹಾಸಿಕವಾಗಿ ಹಾಗೂ ಧಾರ್ಮಿಕವಾಗಿ ಅತ್ಯಂತ ಮಹತ್ವದ ಕ್ಷೇತ್ರವಾಗಿ ಅಭಿವೃದ್ಧಿ ಹೊಂದಿತ್ತು. ಅಲ್ಲಿ ಪಲ್ಲವ ರಾಜರು ಆಳುತ್ತಿದ್ದರು. ಅಲ್ಲಿನ ರಾಜನಿಗೆ ಮೂರು ಜನ ಗಂಡು ಮಕ್ಕಳು. ಆದರೆ, ಮೂರನೆಯವನು ತನ್ನ ಅಣ್ಣಂದಿರಿಗಿಂತ ಮೇಧಾವಿ, ವೀರಾಗ್ರಣಿ, ವಿಧೇಯಿ. ಅವನೇ ಮುಂದೆ ಬೋಧಿಧರ್ಮ ಎನಿಸಿಕೊಂಡನು. ಅವನನ್ನೇ ರಾಜನು ಯುವರಾಜನಾಗಿ ನೇಮಿಸುವನು ಎಂದು ಅವನ ಅಣ್ಣಂದಿರು ಭಾವಿಸಿದರು. ಅದಕ್ಕಾಗಿ ಅವರು ಅವನ ಮೇಲೆ ದ್ವೇಷ ಕಾರಿದರು. ಅವನನ್ನು ಕೊಲ್ಲಬೇಕೆಂದು ಎಲ್ಲ ರೀತಿಯ ಉಪಾಯಗಳನ್ನೂ ಮಾಡಿದರು. ಬೋಧಿಧರ್ಮ ಧಾರ್ಮಿಕ ಪ್ರವೃತ್ತಿಯವನು. ತನ್ನ ಅಣ್ಣಂದಿರ ಅಧಿಕಾರ ದಾಹವನ್ನು ಕಂಡು ಅವನಿಗೆ ಜುಗುಪ್ಸೆ ಬಂತು. ಅವನು ರಾಜಭವನದಿಂದ ಹೊರಬಂದನು. ಅಂದಿನ ಕಾಲದಲ್ಲಿ ಕಾಂಚೀಪುರವು ಬೌದ್ಧಧರ್ಮದ ಒಂದು ದೊಡ್ಡ ಕೇಂದ್ರವಾಗಿತ್ತು. ಆ ಧರ್ಮದ ದೊಡ್ಡ ಗುರುಗಳಾಗಿದ್ದವರು ಪ್ರಜ್ಞಾತಾರ ಎಂಬ ಮಹಾನುಭಾವರು. ಬೋಧಿಧರ್ಮ ಈ ಗುರುಗಳನ್ನು ಆಶ್ರಯಿಸಿದನು.

## ‘ಚೀನಾದೇಶಕ್ಕೆ ಹೋಗು..’

ಬೋಧಿಧರ್ಮನು ಗುರುಗಳ ಬಳಿ ಹನ್ನೆರಡು ವರ್ಷ ಕಳೆದನು. ಬೌದ್ಧಧರ್ಮದ ತಿರುಳನ್ನು ಚೆನ್ನಾಗಿ ಮನನ ಮಾಡಿಕೊಂಡನು; ಬೌದ್ಧ ಧ್ಯಾನವಿಧಾನದಲ್ಲಿ ಪ್ರವೀಣನಾದನು. ಗುರು

ಗಳು ದೇಹತ್ಯಾಗ ಮಾಡುವ ಸಮಯ ಬಂತು. ''ಗುರುಗಳೇ, ನೀವು ಹೋದ ಮೇಲೆ ನಾನೇನು ಮಾಡಲಿ? ಎಲ್ಲಿಗೆ ತಾನೇ ಹೋಗಲಿ?'' ಎಂದು ಕಣ್ಣೀರು ತುಂಬಿಕೊಂಡು ಬೋಧಿಧರ್ಮ ಕೇಳಿದನು. ಪ್ರಜ್ಞಾತಾರ ಗುರುಗಳು ಅವನಿಗೆ, ''ಚೀನಾ ದೇಶಕ್ಕೆ ಹೋಗಿ, ಅಲ್ಲಿ ಬೌದ್ಧಧರ್ಮದ ಧ್ಯಾನ ವಿಧಾನವನ್ನು ಪ್ರಚಾರ ಮಾಡು'' ಎಂದು ಆದೇಶವಿತ್ತರು. ಅದರಂತೆಯೇ ಗುರುಗಳು ದೇಹತ್ಯಾಗ ಮಾಡಿದ ನಂತರ ಬೋಧಿಧರ್ಮನು ಚೀನಾದೇಶಕ್ಕೆ ಪ್ರಯಾಣ ಬೆಳೆಸಲು ಸನ್ನದ್ಧನಾದನು.

ಈ ವೇಳೆಗೆ ಬೋಧಿಧರ್ಮನ ತಂದೆ ಮರಣಹೊಂದಿದ್ದನು. ಬೋಧಿಧರ್ಮನ ಅಣ್ಣನೊಬ್ಬನು ಆಡಳಿತ ನಡೆಸುತ್ತಿದ್ದನು. ಅವನೂ ಸಾವನ್ನಪ್ಪಿದ್ದನು. ಅಣ್ಣನ ಮಗನು ಈಗ ರಾಜ್ಯಭಾರ ಮಾಡುತ್ತಿದ್ದನು. ಅವನಿಗೆ ತನ್ನ ಚಿಕ್ಕಪ್ಪನ ಮೇಲೆ ಬಹಳ ಅಭಿಮಾನ, ಗೌರವ. ಬೋಧಿಧರ್ಮನು ಚೀನಾ ದೇಶಕ್ಕೆ ಹೊರಟು ನಿಂತಿದ್ದಾನೆ ಎಂಬ ವಿಷಯ ಕೇಳಿ ಬಹಳ ನೊಂದುಕೊಂಡನು. ''ರಾಜಧಾನಿಯ ಬಳಿಯೇ ಉಳಿದುಕೊಳ್ಳಿರಿ, ಅದಕ್ಕೆ ಬೇಕಾದ ಎಲ್ಲ ಸವಲತ್ತುಗಳನ್ನೂ ನಾನು ಮಾಡಿಕೊಡುತ್ತೇನೆ'' ಎಂದೂ ಕೇಳಿಕೊಂಡನು. ಆದರೆ ಬೋಧಿಧರ್ಮನು ತನ್ನ ಗುರುಗಳ ಆದೇಶದಂತೆ, ಚೀನಾ ದೇಶಕ್ಕೆ ಹೋಗಲೇಬೇಕೆಂದು ನಿಶ್ಚಯ ಮಾಡಿದನು.

ತನ್ನ ಚಿಕ್ಕಪ್ಪನನ್ನು ಇನ್ನು ಕಾಂಚೀಪುರದಲ್ಲಿಯೇ ಉಳಿಸಿಕೊಳ್ಳಲು ಆಗುವುದಿಲ್ಲವೆಂದು ರಾಜನಿಗೆ ಮನವರಿಕೆಯಾಯಿತು. ಚೀನಾ ದೇಶದಲ್ಲಿ ಬೋಧಿಧರ್ಮನಿಗೆ ಯಾವುದೇ ತೊಂದರೆ ಆಗದಿರಲೆಂದು, ಪಾರಿವಾಳಗಳ ಮೂಲಕ ಸಂದೇಶಗಳನ್ನು ಕಳಿಸಿಕೊಟ್ಟನು. ಮಹಾತ್ಮರಾದ ಬೋಧಿಧರ್ಮರು ಚೀನಾ ದೇಶಕ್ಕೆ ಆಗಮಿಸುವರೆಂದೂ, ಅವರನ್ನು ಸರಿಯಾಗಿ ನೋಡಿಕೊಳ್ಳಬೇಕೆಂದೂ ಆ ಸಂದೇಶ ಪತ್ರಗಳ ಒಕ್ಕಣೆಯಾಗಿತ್ತು. 'ಈ ಬೌದ್ಧ ಸಂನ್ಯಾಸಿಯಲ್ಲಿ ಅದೇನು ವಿಶೇಷತೆ ಇದೆ? ಭಾರತ ದೇಶದ ರಾಜನೊಬ್ಬ ಈ ಬಗೆಯ ಸಂದೇಶಗಳನ್ನು ಕಳಿಸುತ್ತಿದ್ದಾನಲ್ಲ!' ಎಂದು ಚೀನಾ ದೇಶೀಯರು ಆಶ್ಚರ್ಯಪಟ್ಟರು.

## ಚೀನಾದೇಶಕ್ಕೆ ಪ್ರಯಾಣ

ಬೋಧಿಧರ್ಮನು ಚೀನಾ ದೇಶಕ್ಕೆ ಹೋಗಿದ್ದಾದರೂ ಹೇಗೆ? ಇದರ ಬಗ್ಗೆ ಇತಿಹಾಸಕಾರರಲ್ಲಿ ಬಹಳಷ್ಟು ಭಿನ್ನಾಭಿಪ್ರಾಯಗಳಿವೆ. ಹಿಮಾಲಯ ಪರ್ವತಶ್ರೇಣಿಗಳನ್ನು ದಾಟಿ ಅವನು ಚೀನಾ ಪ್ರವೇಶ ಮಾಡಿದನೆಂದು ಕೆಲವರು ನಂಬಿದರೆ, ಸಾಗರ ಮಾರ್ಗವಾಗಿ ಅವನು ಚೀನಾ ದೇಶಕ್ಕೆ ಹೋದನೆಂದು ಮತ್ತೆ ಕೆಲವರು ಅಭಿಪ್ರಾಯಪಡುತ್ತಾರೆ. ಅಲ್ಲದೆ, ಅವನ ಪ್ರಯಾಣಕ್ಕೆ ತಗಲಿದ ಸಮಯಾವಕಾಶದ ಬಗ್ಗೆಯೂ ಬಹಳಷ್ಟು ಭಿನ್ನಾಭಿಪ್ರಾಯಗಳಿವೆ. ಈ ಪ್ರಯಾಣಕ್ಕೆ ಮೂರು ವರ್ಷಗಳು ಹಿಡಿದವಂತೆ.

ಬೋಧಿಧರ್ಮ ಚೀನಾ ದೇಶವನ್ನು ಪ್ರವೇಶಿಸಿದ್ದು ಸರಿಸುಮಾರು ಕ್ರಿ.ಪೂ. ೫೨೭ರಲ್ಲಿ; ಶಾವೊಲಿನ್ ದೇವಸ್ಥಾನ ಉದ್ಘಾಟನೆಯಾದ ಮೂವತ್ತೆರಡು ವರ್ಷಗಳ ನಂತರ. ಅವನು ಮೊದಲು ಪ್ರವೇಶಿಸಿದ್ದು ಗಾವ್‌ಡಾಂಗ್ ಎಂಬ ಪ್ರಾಂತ್ಯವನ್ನು.

ಅವನ ಕೀರ್ತಿ ಮುಂಚೆಯೇ ಅಲ್ಲೆಲ್ಲಾ ಹಬ್ಬಿತ್ತು. ಅವನನ್ನು ನೋಡಲು ನೂರಾರು ಜನ ನೆರೆದಿದ್ದರು. ಅವರೆಲ್ಲ ಅವನನ್ನು ಪ್ರವಚನ ನೀಡುವಂತೆ ಕೇಳಿಕೊಂಡರು. ಬೋಧಿಧರ್ಮನದು ವಿಚಿತ್ರ ನಡವಳಿಕೆ. ಪ್ರವಚನ ನೀಡುವ ಬದಲಾಗಿ ಅಲ್ಲಿಯೇ ಕುಳಿತುಬಿಟ್ಟನು. ಗಾಢವಾದ ಧ್ಯಾನದಲ್ಲಿ ತಲ್ಲೀನನಾದನು. ಹಲವಾರು ಗಂಟೆಗಳ ನಂತರ ಎದ್ದು ಹೊರಟುಬಿಟ್ಟನು. ಇದನ್ನು ನೋಡಿ ಜನರು ಪ್ರಭಾವಿತರಾದರು. ಈ ಭಾರತೀಯ ಬೌದ್ಧ ಗುರುವಿನ ಧ್ಯಾನಸಿದ್ಧಿಯನ್ನು ಕಂಡು ಬೆರಗಾದರು.

## ಚೀನಾ ದೇಶದ ದೊರೆ ವು ಟಿ

ಚೀನಾ ದೇಶಕ್ಕೆ ಬಂದ ಪ್ರಾರಂಭದ ದಿನಗಳಲ್ಲಿಯೇ ಬೋಧಿಧರ್ಮನು ಆ ದೇಶದ ದಕ್ಷಿಣ ಭಾಗವನ್ನು ಆಳುತ್ತಿದ್ದ ವು ಟಿ ಎಂಬ ರಾಜನನ್ನು ಭೇಟಿ ಮಾಡಿದನು. ಈ ರಾಜನು ಬೌದ್ಧಧರ್ಮದ ಶ್ರದ್ಧಾಳು ಅನುಯಾಯಿ. ಅವನು ಬುದ್ಧನ ಅನೇಕ ಮೂರ್ತಿಗಳನ್ನು ನಿರ್ಮಾಣ ಮಾಡಿಸಿದ್ದನು, ಹಲವಾರು ದೇವ ಮಂದಿರಗಳನ್ನು ಕಟ್ಟಿಸಿದ್ದನು; ಹತ್ತುಹಲವು ಬೌದ್ಧ ಧರ್ಮಗ್ರಂಥಗಳನ್ನು ಪ್ರತಿ ಮಾಡಿಸಿದ್ದನು. ಅದೇ ರೀತಿ ಹಲವು ದಾನಧರ್ಮಗಳನ್ನು ಮಾಡಿದ್ದನು. ಅವನು ಬೋಧಿಧರ್ಮನ ಜೊತೆಗೆ ನಡೆಸಿದ ಸಂಭಾಷಣೆ ಹೀಗಿತ್ತು:

ರಾಜ: ನಾನು ರಾಜನಾದ ಮೇಲೆ ಹಲವಾರು ಧರ್ಮ ಕಾರ್ಯಗಳನ್ನು ಮಾಡಿದ್ದೇನೆ. ನನಗೆ ಎಷ್ಟು ಪುಣ್ಯ ಬರುತ್ತದೆ?

ಬೋಧಿಧರ್ಮ: ನಿನಗೆ ಯಾವ ಪುಣ್ಯವೂ ಬರುವುದಿಲ್ಲ.

*(ರಾಜ ಈ ಉತ್ತರದಿಂದ ದಿಗ್ಭ್ರಮೆಗೊಳ್ಳುತ್ತಾನೆ.)*

ರಾಜ: ಎಲ್ಲ ಪವಿತ್ರ ಉಪದೇಶಗಳಲ್ಲಿನ ಮೊದಲನೆಯ ನಿಯಮ ಅದಾವುದು?

ಬೋಧಿಧರ್ಮ : ಅವೆಲ್ಲದರಲ್ಲಿ ಇರುವುದು ವಿಸ್ತಾರವಾದ ಶೂನ್ಯವೊಂದೇ. ಅವಾವುದೂ ಪವಿತ್ರವೇನೂ ಅಲ್ಲ.

*(ರಾಜ ಮತ್ತಷ್ಟು ದಿಗ್ಭ್ರಮೆಗೊಳ್ಳುತ್ತಾನೆ.)*

ರಾಜ : ಹಾಗಾದರೆ ನನ್ನ ಮುಂದೆ ಈಗ ನಿಂತುಕೊಂಡಿರುವವನು (ಬೋಧಿಧರ್ಮನೆಂಬ ವ್ಯಕ್ತಿ) ಅದಾರು?

ಬೋಧಿಧರ್ಮ : ನನಗೆ ಗೊತ್ತಿಲ್ಲ.

ರಾಜ : ಈ ಜಗತ್ತಿನಲ್ಲಿ ಬುದ್ಧ ಎನ್ನುವವನು ಇರುವನೆ?

ಬೋಧಿಧರ್ಮ : ಖಂಡಿತ ಇಲ್ಲ.

ಈ ಉತ್ತರಗಳಿಂದ ರಾಜನಿಗೆ ಬಹಳ ನಿರಾಸೆಯಾಯಿತು. ಭಾರತದಿಂದ ಬಂದ ಸಂನ್ಯಾಸಿಯಿಂದ ಹೊಗಳಿಕೆ ಮತ್ತು ಪ್ರಶಂಸೆಗಳನ್ನು ಆ ರಾಜನು ಬಯಸಿದ್ದನು. ಒಳ್ಳೆಯದನ್ನು ಮಾಡುವುದು ಪ್ರತಿಯೊಬ್ಬ ರಾಜನ ಕರ್ತವ್ಯ. ಅದರಲ್ಲಿ ಹೊಗಳುವುದು ಏನು

ತಾನೇ ಇದೆ? ಕೀರ್ತಿ ಅಥವಾ ಪ್ರಶಂಸೆಗಳನ್ನು ಅರಸುವ ಬದಲು, ಬುದ್ಧನ ವ್ಯಕ್ತಿತ್ವವನ್ನು ಮೈಗೂಡಿಸಿಕೊಂಡು, ಜನರಿಗೆ ರಾಜನು ಸಹಾಯ ಮಾಡಬೇಕಾಗಿತ್ತು. ಎರಡನೆಯದಾಗಿ, 'ನಾನು ಯಾರು?' ಎಂಬ ಪ್ರಶ್ನೆಯೆ ಬೌದ್ಧಧರ್ಮದಲ್ಲಿ ಅಪ್ರಸ್ತುತ. ತನ್ನಲ್ಲಿ ಒಂದು ಆತ್ಮವಿದೆ ಎನ್ನುವುದೇ ಅ ಜ್ಞಾನದ ಮೂಲ. ಮೂರನೆಯದಾಗಿ, ಬುದ್ಧನೆಂಬ ಪರಿಕಲ್ಪನೆ ಶ್ರದ್ಧೆಯ ವಿಷಯ. ಬುದ್ಧನನ್ನು ನಾವು ಕಂಡುಕೊಳ್ಳಬೇಕಾದ್ದು ನಮ್ಮ ಹೃದಯಮಂದಿರದಲ್ಲಿ. ಹೀಗಾಗಿ ಈ ಪ್ರಶ್ನೆಯೂ ಅಪ್ರಸ್ತುತ. ಹಾಗೆ ನೋಡಿದರೆ, ಅದು ರಾಜನ ಶ್ರದ್ಧಾಹೀನತೆಯನ್ನು ಎತ್ತಿತೋರಿಸುತ್ತದೆ.

ಏನೇ ಆಗಲಿ, ಈ ಉತ್ತರಗಳಿಂದ ಬಹಳ ಕೋಪಗೊಂಡ ರಾಜನು ಬೋಧಿಧರ್ಮನನ್ನು ಅರಮನೆಯಿಂದ ಹೊರಗೆ ಹಾಕಿಸಿ ಬಿಟ್ಟನು. ಸ್ಥಿತಪ್ರಜ್ಞನಾದ ಆ ಮಹಾನ್ ಸಂತನು ನಗುನಗುತ್ತಲೇ ತೆರಳಿದನು. ಹಲವು ವರ್ಷಗಳ ನಂತರ, ಆ ಮೂರ್ಖ ರಾಜನಿಗೆ ತನ್ನ ತಪ್ಪಿನ ಅರಿವಾಯಿತು. ಬೋಧಿಧರ್ಮನ ಸಾವಿನ ವೃತ್ತಾಂತ ವನ್ನು ಕೇಳಿ ತಿಳಿದ ಅವನು ಒಂದು ಫಲಕದ ಮೇಲೆ ಹೀಗೆ ಬರೆಸಿದ:

**ಅಹಾ! ಸಂದರ್ಶಿಸದೆಯೇ ಅವನನ್ನು ನಾನು ಕಂಡೆ**
**ಒಡನಾಡದೆಯೇ ಅವನ ಭೇಟಿ ಮಾಡಿದೆ**
**ಸಂಭಾಷಿಸದೆಯೇ ಅವನ ಜೊತೆ ಮಾತಾಡಿದೆ**
**ಈಗ ನಾನು ಆಳವಾಗಿ ಪಶ್ಚಾತ್ತಾಪ ಪಡುತ್ತಿರುವೆ..**

(ಜೆನ್ ಬೌದ್ಧ ಸಾಧನಾ ಪದ್ಧತಿಯಲ್ಲಿ ಕೊಯನ್ ಅಥವಾ ಮಾನಸಿಕ ಒಗಟು ಎಂಬ ಸಾಧನೆ ಇದೆ. ಅಂಥ ಹಲವಾರು ಕೊಯನ್‌ಗಳಿಗೆ ಮೇಲಿನ ಸಂಭಾಷಣೆಯೇ ಮೂಲವಾಗಿದೆ ಎಂದು ಜೆನ್ ಸಾಧಕರು ನಂಬುತ್ತಾರೆ. ನಮ್ಮ ಬಾಹ್ಯ ಯಶಸ್ಸುಗಳು ಮತ್ತು ಸಾಧನೆಗಳನ್ನು ಜನರು ಗೌರವಿಸಬೇಕು ಎಂಬ ದೊಡ್ಡ ಬಲೆಗೆ ನಾವು ಸಿಕ್ಕಿಹಾಕಿಕೊಳ್ಳುತ್ತೇವೆ. ಇದು ಸಾಧನೆಯ ಮಾರ್ಗ ದಲ್ಲಿರುವ ದೊಡ್ಡ ಅಡೆತಡೆಯಾಗಿ ಪರಿಣಮಿಸುತ್ತದೆ ಎಂಬುದೇ ಈ ಕೊಯನ್‌ನ ಒಳಾರ್ಥ.)

## ವಿರೋಧಗಳ ನಡುವೆ

ಚೀನಾ ದೇಶದಲ್ಲಿ ಬೋಧಿಧರ್ಮನು ಬಹಳಷ್ಟು ವಿರೋಧ ವನ್ನೂ ಎದುರಿಸಬೇಕಾಯಿತು. ಬೌದ್ಧ ಧರ್ಮದ ಅಂತರಾಳವಾದ ಧ್ಯಾನಪದ್ಧತಿ ಮತ್ತು ಮಾನಸಿಕ ನಿಯಂತ್ರಣಗಳನ್ನು ಅವನು ಬೋಧಿಸುತ್ತಿದ್ದನು. ಬೌದ್ಧ ಧಾರ್ಮಿಕ ಗ್ರಂಥಗಳು ಈ ಸಾಧನೆಗೆ ಉಪಕಾರಿಗಳಾಗಬೇಕೇ ಹೊರತು, ಅವುಗಳ ಅಧ್ಯಯನ ಮತ್ತು ವಿಚಾರವಿನಿಯಮಗಳೇ ಪ್ರಮುಖವಾಗಬಾರದು ಎಂದು ಅವನ ಅಭಿಪ್ರಾಯ. ಆದರೆ ಆ ಕಾಲದಲ್ಲಿ, ಬೌದ್ಧ ಧರ್ಮಗ್ರಂಥಗಳ ಅಧ್ಯಯನವೇ ಮುಖ್ಯವಾಗಿತ್ತು; ಧ್ಯಾನಾಭ್ಯಾಸಕ್ಕೆ ಅಷ್ಟೊಂದು ಪ್ರಾಧಾನ್ಯತೆ ನೀಡುತ್ತಿರಲಿಲ್ಲ. ಇದರಿಂದಾಗಿ ಮಡಿವಂತ ಬೌದ್ಧ ಗುರುಗಳು, ಸಂನ್ಯಾಸಿಗಳು ಬೋಧಿಧರ್ಮನನ್ನು ಬಹಳವಾಗಿ ವಿರೋಧಿಸಿದರು. ಅವನ ಮೇಲೆ ಹಲವಾರು ಸಲ ದೈಹಿಕ ಹಲ್ಲೆ ಗಳೂ ನಡೆದವು. ಹಲವಾರು ತಿಂಗಳುಗಳ ಕಾಲ ಅವನು ಭಿಕ್ಷುಕ ನಂತೆ ಊರಿಂದೂರಿಗೆ ಅಲೆದಾಡಿದನು.

ಇಷ್ಟಾದರೂ ಧೃತಿಗೆಡದ ಮಹಾತ್ಮ ಬೋಧಿಧರ್ಮನು ತನ್ನ ಪಯಣವನ್ನು ಮುಂದುವರೆಸಿದನು. ನಾನ್‌ಜಿಂಗ್ ಎಂಬ ಪಟ್ಟಣ ವನ್ನು ತಲುಪಿದನು. ಅಲ್ಲಿ 'ಹೂವಿನ ಮಳೆಯ ಉದ್ಯಾನ' ಎಂಬ ಸ್ಥಳವಿತ್ತು. ಜನರು ಅಲ್ಲಿಗೆ ಹೋಗಿ ವಿಶ್ರಮಿಸಿಕೊಳ್ಳುತ್ತಿದ್ದರು. ಅಲ್ಲೊಬ್ಬ ಬೌದ್ಧ ಭಿಕ್ಷು ಪ್ರವಚನ ಮಾಡುತ್ತಿದ್ದನು. ಜನರ ದೊಡ್ಡ ಗುಂಪು ಅವನನ್ನು ತನ್ಮಯತೆಯಿಂದ ಆಲಿಸುತ್ತಿತ್ತು. ಬೋಧಿ ಧರ್ಮನೂ ಅಲ್ಲಿಗೆ ಹೋಗಿ ನಿಂತು ಕೇಳಲಾರಂಭಿಸಿದನು. ಆ ಪ್ರವಚನಕಾರನ ಹೆಸರು ಶೆನ್ ಗುವಾಂಗ್.

## ಶಿಷ್ಯನೊಬ್ಬ ಸಿಕ್ಕಿದ

ಶೆನ್ ಗುವಾಂಗ್ ಹಿಂದೆ ಒಬ್ಬ ಪ್ರಸಿದ್ಧ ಸೇನಾ ಅಧಿಕಾರಿಯಾಗಿ ದ್ದನು. ಯುದ್ಧಗಳಲ್ಲಿ ಹಲವಾರು ಜನರನ್ನು ಕೊಂದು ಹಾಕಿದ್ದನು. ಕೊಂದವರ ಕುಟುಂಬದವರು ತನ್ನನ್ನು ಹತ್ಯೆಮಾಡಬಹುದೆಂಬ ಆತಂಕ ಅವನನ್ನು ಕಾಡತೊಡಗಿತು. ಇದು ಅವ ನಲ್ಲಿ ಪರಿವರ್ತನೆ ಯನ್ನು ತಂದಿತು. ಅವನು ಬೌದ್ಧ ಭಿಕ್ಷುವಾದನು. ಕ್ರಮೇಣ ಬಹು ದೊಡ್ಡ ಪ್ರವಚನಕಾರನಾದನು. ಬೋಧಿಧರ್ಮನು ಅವನ ಭಾಷಣ ವನ್ನು ಮನಸ್ಸುಕೊಟ್ಟು ಕೇಳಲು ಆರಂಭಿಸಿದನು. ಭಾಷಣಕಾರನು



ಬೋಧಿಧರ್ಮನ ಪರ್ಯಟನೆ

ಉತ್ತಮ ವಿಚಾರಗಳನ್ನು ಹೇಳಿದಾಗ, ಪ್ರಶಂಸೆಯ ಸೂಚಕವಾಗಿ ತಲೆದೂಗುವನು; ಅವನು ತಪ್ಪು ಮಾಡಿದಾಗ, ವಿರೋಧವನ್ನು ವ್ಯಕ್ತಪಡಿಸಲು ಇಲ್ಲವೆಂಬಂತೆ ತಲೆಯಾಡಿಸುವನು. ಇದನ್ನು ನೋಡುತ್ತಿದ್ದ ಶೆನ್ ಗುವಾಂಗ್‌ನ ಮನಸ್ಸಿನಲ್ಲಿ ಕ್ರೋಧ ಅಧಿಕ ವಾಗುತ್ತಲೇ ಇತ್ತು. ವಿಚಿತ್ರ, ವಿಕಾರ ರೂಪದ ಈ ವಿದೇಶೀ ಸಂನ್ಯಾಸಿಯ ಈ ಅನಾಗರಿಕ ವರ್ತನೆಯನ್ನು ಅವನು ಸಹಿಸ ದಾದನು. ಕೋಪದಿಂದ ತನ್ನ ಜಪಮಾಲೆಯ ಮಣಿಗಳನ್ನು ಹರಿದು ಅವನೆಡೆಗೆ ಎಸೆದನು. ವೇಗದಿಂದ ಬಂದೆರಗಿದ ಆ ಮಣಿ ಗಳು ಬೋಧಿಧರ್ಮನ ಮುಂದಿನ ಎರಡು ಹಲ್ಲುಗಳನ್ನು ಮುರಿ ದವು. ರಕ್ತ ಹರಿಯಲು ಆರಂಭಿಸಿತು. ಇಷ್ಟಾದರೂ ಪುಣ್ಯಚೇತನ ನಾದ ಬೋಧಿಧರ್ಮನು ಶೆನ್ ಗುವಾಂಗ್‌ನ ಕಡೆಗೆ ನಗುನಗು ತ್ತಲೇ ಮುಖ ಮಾಡಿದನು. ಹಿಂತಿರುಗಿ ಹೊರಟೇಹೋದನು. ಈ ಅದ್ಭುತ ವರ್ತನೆಯನ್ನು ಶೆನ್ ಗುವಾಂಗ್ ಎದುರು ನೋಡಿರಲಿಲ್ಲ. ಅವನು ಬೋಧಿಧರ್ಮನನ್ನೇ ಹಿಂಬಾಲಿಸಲು ಆರಂಭಿಸಿದನು.

ಮಹಾತ್ಮನು ಉತ್ತರ ದಿಕ್ಕಿನತ್ತ ಪಯಣ ಬೆಳೆಸಿ, ಯಾಂಗ್ ಜಿ ನದಿಯ ತಟವನ್ನು ತಲುಪಿದನು. ಅಲ್ಲಿ ಒಬ್ಬ ವೃದ್ಧ ಮಹಿಳೆಯು ಕಟ್ಟಿಗೆಗಳ ಹೊರೆಯನ್ನು ಹೊತ್ತು ನಡೆಯುತ್ತಿದ್ದಳು. ಅವಳೆಡೆಗೆ ಹೋದ ಬೋಧಿಧರ್ಮನು ಒಂದು ಕಟ್ಟಿಗೆಯನ್ನು ನೀಡುವಂತೆ ವಿನಯಪೂರ್ವಕವಾಗಿ ಕೇಳಿಕೊಂಡನು. ಆ ಕಟ್ಟಿಗೆಯನ್ನು ನದಿಯ ನೀರಿನಲ್ಲಿ ತೇಲಲು ಬಿಟ್ಟು, ಅದರ ಮೇಲೆ ತನ್ನ ಕಾಲು ಗಳನ್ನು ಇಟ್ಟು ನದಿಯನ್ನು ದಾಟಿಯೇ ಬಿಟ್ಟನು. ದೂರದಿಂದ ಇದನ್ನು ನೋಡುತ್ತಿದ್ದ ಶೆನ್ ಗುವಾಂಗ್ ತಾನೂ ಆ ಮುದುಕಿಯ ಬಳಿಯ ಬಂದು, ಅವಳನ್ನು ಕೇಳದೆಯೇ ಅವಳಿಂದ ಬೊಗಸೆ ಯಷ್ಟು ಕಟ್ಟಿಗೆಗಳನ್ನು ಕಿತ್ತುಕೊಂಡು, ಅವುಗಳನ್ನು ನದಿಗೆ ಎಸೆದು, ಅವುಗಳ ಮೇಲೆ ಕಾಲಿಟ್ಟನು. ಕಟ್ಟಿಗೆಗಳು ಮುಳುಗಿ ಹೋದವು. ಅವನೂ ಮುಳುಗಲು ಆರಂಭಿಸಿದನು. ಆ ವೃದ್ಧ ಮಹಿಳೆ ಶೆನ್ ಗುವಾಂಗನನ್ನು ಮೇಲೆತ್ತಿ ಕಾಪಾಡಿದಳು. ತನ್ನ ಅನುಮತಿಯಿಲ್ಲದೆ ಕಟ್ಟಿಗೆಗಳನ್ನು ಕಿತ್ತುಕೊಂಡಿದ್ದಕ್ಕೆ ಬೈದಾಡಿದಳು. ಅಗೌರವವನ್ನು ತೋರಿಸಿದ್ದರಿಂದಲೇ ಅವನು ಮುಳುಗಬೇಕಾಯಿತು ಎಂದು ಹೇಳಿಕೊಟ್ಟಳು. 'ನೀನು ಹಿಂಬಾಲಿಸುತ್ತಿರುವ ವ್ಯಕ್ತಿಯು ಒಬ್ಬ ಮಹಾತ್ಮ' ಎಂದು ಅವನಿಗೆ ಅರಿವು ಮಾಡಿಕೊಟ್ಟಳು. ಇದೇ ಸಮಯದಲ್ಲಿ ಮುಳುಗಿದ್ದ ಕಟ್ಟಿಗೆಗಳು ಮೇಲೆದ್ದು ಬಂದವು. ಅವು ಗಳನ್ನು ಮೆಟ್ಟಿ, ನದಿಯ ಪ್ರವಾಹದ ರಭಸದಲ್ಲಿ ಶೆನ್ ಗುವಾಂಗ್ ಆಚೆಯ ದಡವನ್ನು ತಲುಪಿದನು. ತನ್ನ ಗುರುದೇವನನ್ನು ಅರ ಸುತ್ತ ಸಾಗಿದನು.

### ಶಾವೊಲಿನ್‌ನಲ್ಲಿ ಧ್ಯಾನಸಿದ್ಧ

ತನ್ನನ್ನು ಹಿಂಬಾಲಿಸಿ ಬರುತ್ತಿರುವ ಶೆನ್ ಗುವಾಂಗ್‌ನತ್ತ ಸ್ವಲ್ಪವೂ ಗಮನಕೊಡದ ಬೋಧಿಧರ್ಮನು ಶಾವೊಲಿನ್ ದೇವ ಮಂದಿರದ ಬಳಿ ಬಂದನು. ಒಂದು ಐತಿಹ್ಯದ ಪ್ರಕಾರ ಅಲ್ಲಿನ ಸಂನ್ಯಾಸಿಗಳು, ಅವನನ್ನು ಒಳಗೆ ಬಿಟ್ಟುಕೊಡಲು ನಿರಾಕರಿಸು ತ್ತಾರೆ. ಇನ್ನೊಂದು ಕಥೆಯ ಪ್ರಕಾರ, ಸಂನ್ಯಾಸಿಗಳು ಅವನನ್ನು ಸ್ವಾಗತಿಸಿದರೂ, ಬೋಧಿಧರ್ಮನೇ ಒಳಕ್ಕೆ ಪ್ರವೇಶಿಸಲು ನಿರಾ ಕರಿಸುತ್ತಾನೆ.

ಶಾವೋಲಿನ್ ದೇಗುಲದ ಹಿಂದೂ ಮುಂದೂ ಹಲವಾರು ಬೆಟ್ಟಗಳಿವೆ. ಬೋಧಿಧರ್ಮನು ದೇವಮಂದಿರದ ಹಿಂದೆ ಇದ್ದ ಗುಡ್ಡವೊಂದನ್ನು ಆರಿಸಿಕೊಂಡನು. ಅಲ್ಲಿನ ಒಂದು ಗವಿಯನ್ನು ಹೊಕ್ಕನು. ಅದರ ಕಲ್ಲುಗೋಡೆಯ ಕಡೆಗೆ ಮುಖಮಾಡಿ ನಿರಂ ತರ ಧ್ಯಾನವನ್ನು ಮಾಡಲು ಆರಂಭಿಸಿಯೇ ಬಿಟ್ಟನು. ಇದೇ 'ಗೋಡೆಯ ಕಡೆಗೆ ಮುಖಮಾಡಿ ಮಾಡುವ ಧ್ಯಾನ' ಎಂದು ಬೋಧಿಧರ್ಮನ ಹೆಸರಿನಲ್ಲಿ ಸುಪ್ರಸಿದ್ಧವಾದ ಧ್ಯಾನವಿಧಾನ.

ಶೆನ್ ಗುವಾಂಗ್ ಗುಹೆಯ ಹೊರಗೆ ಕಾವಲನ್ನು ಕಾಯುತ್ತ ಕುಳಿತನು. ಗುರುವಿಗೆ ಯಾವ ಹಾನಿಯೂ ಆಗದಂತೆ ಎಚ್ಚರ ವಹಿಸಿದನು. ದಿನಗಳಾಯಿತು; ತಿಂಗಳಾಯಿತು; ವರ್ಷಗಳೇ ಆಯಿತು. ಬೋಧಿಧರ್ಮನ ಧ್ಯಾನ ಮುಂದುವರೆದೇ ಇತ್ತು. ಮಧ್ಯೆ ಮಧ್ಯೆ ಶೆನ್ ಗುವಾಂಗ್ ಗುರುವನ್ನು ಅಂಗಲಾಚುವನು; ಶಿಷ್ಯನನ್ನಾಗಿ ಸ್ವೀಕರಿಸಿ ಉಪದೇಶ ಮಾಡಬೇಕೆಂದು ಬೇಡಿಕೊಳ್ಳು ವನು. ಆದರೆ ಬೋಧಿಧರ್ಮನ ಮನಸ್ಸು ಕರಗಲೇ ಇಲ್ಲ. ಗುರುವು ಶಿಷ್ಯನ ಕಡೆಗೆ ಕಣ್ಣೆತ್ತಿ ನೋಡಲೂ ಇಲ್ಲ. ಮಧ್ಯೆ ಮಧ್ಯೆ ಶಾವೊಲಿನ್ ಮಠದಿಂದ ಸಂನ್ಯಾಸಿಗಳು ಬಂದುಹೋಗುವರು. ಶಾವೊಲಿನ್ ಮಂದಿರಕ್ಕೆ ಮತ್ತೆ ಮತ್ತೆ ಆಹ್ವಾನಿಸುವರು. ಆದರೆ ಬೋಧಿಧರ್ಮ ಯಾವುದಕ್ಕೂ ಪ್ರತಿಕ್ರಿಯೆ ನೀಡಲಿಲ್ಲ.

ಕೆಲಕಾಲದ ನಂತರ ಬೋಧಿಧರ್ಮನ ಏಕಾಗ್ರತೆ ಮತ್ತಷ್ಟು ಉತ್ಕಟವಾಯಿತು. ಇದರಿಂದ ಅವನ ಪ್ರತಿಕೃತಿಯು ಗುಹೆಯ ಕಲ್ಲುಗೋಡೆಯಲ್ಲಿ ಮೂಡಿತು. ಹೀಗೆಯೇ ಎಂಟು ವರ್ಷ


'ಗೋಡೆಗೆ ಎದುರಾಗಿ ಧ್ಯಾನ'

ಕಳೆದುಹೋಯಿತು. ಒಂಬತ್ತನೆಯ ವರ್ಷದ ಹೊತ್ತಿಗೆ ಬೋಧಿಧರ್ಮನಿಗಾಗಿ ಒಂದು ವಿಶೇಷ ಕೊಠಡಿಯನ್ನು ಗುಹೆಯ ಪಕ್ಕದಲ್ಲಿಯೇ ಕಟ್ಟಲಾಯಿತು. ಒಂಬತ್ತು ವರ್ಷಗಳ ಸುದೀರ್ಘ ಧ್ಯಾನಾಭ್ಯಾಸದ ನಂತರ ಸ್ವಲ್ಪವೂ ಮಾತನಾಡದೆ ಅವನು ನೂತನ ಕೊಠಡಿಯನ್ನು ಪ್ರವೇಶಿಸಿದನು. ಒಡನೆ ಕುಳಿತು ಮತ್ತೆ ಧ್ಯಾನ ಮಾಡಲು ಆರಂಭಿಸಿದನು. ಈ ಧ್ಯಾನ ನಾಲ್ಕು ವರ್ಷಗಳ ಮುಂದುವರಿಯಿತು.

ಈ ಮಧ್ಯೆ ಶೆನ್ ಗುವಾಂಗನ ಪರಿಸ್ಥಿತಿ ಶೋಚನೀಯವಾಗಿತ್ತು. ಅವನು ಮತ್ತೆ ಮತ್ತೆ ತನ್ನ ಗುರುವನ್ನು ಕೇಳಿಕೊಂಡರೂ, ಬೋಧಿಧರ್ಮನು ಅವನಿಗೆ ಏನನ್ನೂ ಬೋಧಿಸಲಿಲ್ಲ. ನಾಲ್ಕು ವರ್ಷಗಳು ಅಂದರೆ ಒಟ್ಟಾರೆ ಹದಿಮೂರು ವರ್ಷಗಳ ಕಡೆಯಲ್ಲಿ ಭೀಕರ ಚಳಿಗಾಲ ತಲೆದೋರಿತು. ಬಡ ಶೆನ್ ಗುವಾಂಗ್ ಬೋಧಿಧರ್ಮನ ಕೊಠಡಿಯ ಹೊರಗೆ ಚಳಿಯಲ್ಲಿ ನಡುಗುತ್ತ ನಿಂತಿದ್ದನು. ಅವನಿಗೆ ವಿಪರೀತ ಕೋಪ ಬಂತು. ಹಿಮದ ದೊಡ್ಡ ಗಡ್ಡೆಯನ್ನು ತೆಗೆದುಕೊಂಡು, ಕಿಟಕಿಯ ಮೂಲಕ ಕೊಠಡಿಯ ಒಳಕ್ಕೆ ಎಸೆದುಬಿಟ್ಟನು. ಆ ಗಡ್ಡೆಯು ಒಡೆದು ಭಾರೀ ಶಬ್ದ ಉಂಟಾಯಿತು. ಬೋಧಿಧರ್ಮನು ಕಣ್ತೆರೆದು ಶಿಷ್ಯನೆಡೆಗೆ ದಿಟ್ಟಿಸಿ ನೋಡಿದನು. ಶಿಷ್ಯನು ಕೋಪ ಮತ್ತು ಹತಾಶೆಗಳಿಂದ ತನ್ನ ಬೇಡಿಕೆಯನ್ನು ಮತ್ತೆ ಮುಂದಿಟ್ಟನು.

## ಗುರುವಿನ ಉಪದೇಶ

ಆಕಾಶದಿಂದ ರಕ್ತಬಣ್ಣದ ಹಿಮವು ಕೆಳಕ್ಕೆ ಬಿದ್ದರೆ ಮಾತ್ರ ತಾನು ಉಪದೇಶ ನೀಡುವುದಾಗಿ ಬೋಧಿಧರ್ಮನು ಶಿಷ್ಯನಿಗೆ ಹೇಳಿದನು. ಇದರಿಂದ ಹತಾಶಗೊಂಡ ಶೆನ್ ಗುವಾಂಗ್ ತನ್ನ ಖಡ್ಗದಿಂದ ಎಡತೋಳನ್ನು ಕತ್ತರಿಸಿ, ರಕ್ತಸಿಕ್ತವಾದ ಎಡಗೈಯನ್ನು ಆಕಾಶದೆತ್ತರ ಎಸೆದನು. ಅದು ಕೆಳಕ್ಕೆ ಬೀಳುವಾಗ ಹಿಮಾವೃತವಾಗಿತ್ತು. ಕೆಂಪು ಬಣ್ಣದ ಹಿಮದಂತೆ ಕಂಡುಬಂತು. ಅಗ ಮಾತ್ರ ಬೋಧಿಧರ್ಮನು ಉಪದೇಶಿಸಲು ಒಪ್ಪಿಕೊಂಡನು. ಶೆನ್ ಗುವಾಂಗ್‌ನ ಜೊತೆಗೆ ಶಿಖರವು ಮಟ್ಟಸವಾಗಿರುವ ಹತ್ತಿರದ ಒಂದು ಗುಡ್ಡವನ್ನು ಹತ್ತಿದನು. ಇದೊಂದು ಮೌನ ಸಂದೇಶವಾಗಿತ್ತು. ಗುಡ್ಡದ ಶಿಖರವು ಮಟ್ಟಸವಾಗಿರುವಂತೆ, ಮನಸ್ಸನ್ನೂ ಯಾವುದೇ ಪ್ರಕ್ಷುಬ್ಧತೆಗಳಿಲ್ಲದೆ ಮಟ್ಟಸಗೊಳಿಸಬೇಕೆಂಬ ಈ ದಿವ್ಯ ಸಂದೇಶವನ್ನು ಶಿಷ್ಯನು ಅರ್ಥ ಮಾಡಿಕೊಂಡನು. ಅವನನ್ನು ಅಲ್ಲಿಯೇ ಬಿಟ್ಟು ಬೋಧಿಧರ್ಮ ಹೊರಟುಹೋದನು. ಶಿಷ್ಯನು ಆ ಪರ್ವತದಲ್ಲಿಯೇ ಏಕಾಂತದಲ್ಲಿ ಸಾಧನೆಯಲ್ಲಿ ಮುಳುಗಿದನು. ಸುಖದುಃಖಗಳನ್ನು ಸಮಾನವಾಗಿ ಕಾಣಬೇಕೆಂಬ ಸತ್ಯವನ್ನು ಮನಗಂಡನು. ಹೀಗೆ ಹೆಚ್ಚು ಮಾತುಗಳನ್ನು ಆಡದೆಯೇ ಮನಸ್ಸಿನಿಂದ ಮನಸ್ಸಿಗೆ, ಹೃದಯದಿಂದ ಹೃದಯಕ್ಕೆ ನೀಡುವ ದೊಡ್ಡ ಪಾಠವನ್ನು ಬೋಧಿಧರ್ಮನು ಹೇಳಿಕೊಟ್ಟನು. ಈ ವಿಧಾನವನ್ನು 'ಕ್ರಿಯಾಭಾಷೆ' ಎಂದು ಜೆನ್ ಉಪಾಸನಾ ವಿಧಾನದಲ್ಲಿ ಕರೆಯುತ್ತಾರೆ. ಈ ಸಾಧನೆಯನ್ನು ಮಾಡಿದ ಶೆನ್ ಗುವಾಂಗ್ ಸಾಕ್ಷಾತ್ಕಾರದ ನಂತರ ಹುಯಿ ಕೆ ಎಂಬ ಹೆಸರನ್ನು



ಎಡಗೈ ಕತ್ತರಿಸಿದ ಶಿಷ್ಯ

ಪಡೆದುಕೊಂಡ. ಶಾವೊಲಿನ್ ದೇಗುಲದ ಮಹಂತನಾದ. ಅವನ ಎಡಗೈ ಕತ್ತರಿಸಿಕೊಂಡಿದ್ದರಿಂದ, ಬಲಗೈಯಲ್ಲಿ ಮಾತ್ರ ನಮಸ್ಕರಿಸುತ್ತಿದ್ದ. ಹೀಗಾಗಿ ಈಗಲೂ ಜೆನ್ ಸಂನ್ಯಾಸಿಗಳು ಬಲಗೈಯಲ್ಲಿ ಮಾತ್ರವೇ ನಮಸ್ಕಾರವನ್ನು ಪರಸ್ಪರ ವಿನಿಮಯ ಮಾಡಿಕೊಳ್ಳುತ್ತಾರೆ.

## ಬೋಧಿಧರ್ಮನ ಖ್ಯಾತಿ

ಚೀನಾ ದೇಶದ ಬೌದ್ಧ ಸಂನ್ಯಾಸಿಗಳಿಗೆ ಧ್ಯಾನದಲ್ಲಿ ತಲ್ಲೀನರಾಗಲು ಬೇಕಾದ ಶಾರೀರಕ ಕ್ಷಮತೆ ಇಲ್ಲದಿರುವುದನ್ನು ಗಮನಿಸಿ, ಬೋಧಿಧರ್ಮನು ಅವರಿಗೆ ಅನೇಕ ದೈಹಿಕ ವ್ಯಾಯಾಮಗಳನ್ನೂ, ಯುದ್ಧ ಕ್ರಿಯೆಗಳನ್ನೂ ಹೇಳಿಕೊಟ್ಟನು. ಅದೇ ಮುಂದೆ ಕುಂಗ್-ಫು ಯುದ್ಧ ಪದ್ಧತಿಯಾಗಿ ಅಭಿವೃದ್ಧಿ ಹೊಂದಿತು.

ಬೋಧಿಧರ್ಮನು ಸುಮಾರು ೧೫೦ ವರ್ಷಗಳ ಕಾಲ ಜೀವಿಸಿದ್ದನು ಎಂದು ಒಂದು ಐತಿಹ್ಯ ಹೇಳುತ್ತದೆ. ಅವನು ಚೀನಾ ದೇಶದಲ್ಲಿಯೇ ದೇಹತ್ಯಾಗ ಮಾಡಿದನೆಂದು ಕೆಲವರು ಹೇಳಿದರೆ, ಅವನು ತನ್ನ ತಾಯ್ನಾಡಿಗೆ ಹಿಂದಿರುಗಿದನೆಂದು ಮತ್ತೆ ಕೆಲವರು ಅಭಿಪ್ರಾಯಪಡುತ್ತಾರೆ.

ಬೋಧಿಧರ್ಮನು 'ಚಾನ್ ಬೌದ್ಧಧರ್ಮ ಪಂಗಡ' ವನ್ನು ಚೀನಾದೇಶದಲ್ಲಿ ಹುಟ್ಟುಹಾಕಿದನು. ಅವನೊಬ್ಬ ಐತಿಹಾಸಿಕ ವ್ಯಕ್ತಿಯಾಗಿದ್ದರೂ, ಅವನ ಸುತ್ತಲೂ ನೂರಾರು ದಂತಕತೆಗಳು ಕಾಲಾಂತರದಲ್ಲಿ ಹಬ್ಬಿದವು. ಚಾನ್ ಪಂಗಡವು ಜಪಾನ್ ಮತ್ತು ಕೊರಿಯಾ ದೇಶಗಳಿಗೆ ಹಬ್ಬಿತು. ಜಪಾನಿನಲ್ಲಿ ಇದೇ ಈಗ ಪ್ರಸಿದ್ಧವಾಗಿರುವ 'ಜೆನ್ ಧ್ಯಾನವಿಧಾನ' ವಾಗಿ ಬೆಳೆದುಬಂತು. ಜಪಾನಿನಲ್ಲಿ ಬೋಧಿಧರ್ಮನ ಬೊಂಬೆಯನ್ನು ಅದೃಷ್ಟದ ಸಂಕೇತವಾಗಿ ಪರಿಗಣಿಸುತ್ತಾರೆ. ಬೋಧಿಧರ್ಮ ಯುಗ ಪ್ರವರ್ತಕನಾದ ಮಹಾನ್ ಸಂತ; ಬೌದ್ಧಧರ್ಮೀಯರು ನಂಬುವಂತೆ ಇವನು ಎರಡನೆಯ ಬುದ್ಧನೇ ಸರಿ.